# ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ

**ಫೋನ ನಂ. (ಮೋ):** 94806 96389
**(ಕಛೇರಿ):** 08354–230276
**(ಫ್ಯಾಕ್ಸ):** 08354–230300
**e-mail:** registrar@uhsbagalkot.edu.in

**ಕುಲಸಚಿವರ ಕಚೇರಿ**
ಉದ್ಯಾನಗಿರಿ, ಸೀಮಿಕೇರಿ ಕ್ರಾಸ್ ಹತ್ತಿರ,
ಬಾಗಲಕೋಟ – 587 104


ಸಂಖ್ಯೆ: ಕುಸ/ನೇವಿ–4/ಶಿ..ಜೇ.ಪ/1359/2017–18 ದಿನಾಂಕ:–12.01.2018

## ಅಧಿಸೂಚನೆ

**ವಿಷಯ:** ದಿನಾಂಕ: 22.11.2008 ರಿಂದ 31.12.2016ರ ಅವಧಿಗೆ ದಿನಾಂಕ: 01.01.2017 ರಲ್ಲಿ ಇದ್ದಂತೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯ ಬೋಧಕೇತರ ಸಿಬ್ಬಂದಿ ವೃಂದದ ಪರಿಷ್ಕೃತ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಕುರಿತು.

**ಉಲ್ಲೇಖ:**
1. ಸರ್ಕಾರದ ಆದೇಶ ಸಂಖ್ಯೆ. ಸಿಆಸುಇ 182 ಎಸ್‌ಆರ್‌ಆರ್ 2011, ದಿ: 06.05.2017
2. ಆದೇಶ ಸಂಖ್ಯೆ:ಕುಸ/ನೇ.ವಿ–IV/ಶಿನೌಪ–8/371/1833/2017–18 ದಿ: 27.06.2017
3. ಸರ್ಕಾರದ ಪತ್ರದ ಸಂಖ್ಯೆ: ತೋಇ 285 ತೀಇವಿ 2017 ದಿ: 26.09.2017
4. ಅ.ಸ.ಪ.ಸಂಖ್ಯೆ:ಸಿಆಸುಇ 99 2017(ಭಾ–1) ದಿ: 25.11.2017
5. ಈ ಕಚೇರಿ ತಾತ್ಕಾಲಿಕ ಜೇಷ್ಠತಾ ಪಟ್ಟಿ ಅಧಿಸೂಚನೆ ಸಮಸಂಖ್ಯೆ ದಿ: 01.12.2017
6. ಮಾನ್ಯ ಕುಲಪತಿಗಳು ಇವರ ಅನುಮೋದನೆ ದಿ: 12.01.2018

/*/*/*/

ಬಿ.ಕೆ ಪವಿತ್ರ ಮತ್ತು ಇತರರು ವಿರುದ್ಧ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯವು ಸಿವಿಲ್ ಅಪೀಲ್ ಸಂಖ್ಯೆ. 2368/2011 ಮತ್ತು ಇತರ ಸಿವಿಲ್ ಅಪೀಲುಗಳಲ್ಲಿ ದಿನಾಂಕ: 09.02.2017 ರಂದು ನೀಡಿರುವ ತೀರ್ಪಿನಲ್ಲಿ ಕರ್ನಾಟಕ (ರಾಜ್ಯ ಸಿವಿಲ್ ಸೇವೆಗಳಲ್ಲಿಯ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿದ ಸರ್ಕಾರಿ ನೌಕರರ ಜೇಷ್ಠತೆಯ ನಿರ್ಧಾರಣಾ ಅಧಿನಿಯಮ, 2002ರ ಪ್ರಕರಣ 3 ಮತ್ತು 4 ನ್ನು ಸಂವಿಧಾನದ ಅನುಚ್ಛೇದ–14 ಮತ್ತು 16 ನ್ನು ಅಧಿಕಾರಾತೀತ (Ultravirus Articles 14 and 16 of the Constitution) ಎಂದು ಆದೇಶಿಸಿರುತ್ತದೆ.

ಈ ಹಿನ್ನೆಲೆಯಲ್ಲಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು) ವಿಭಾಗವು ಉಲ್ಲೇಖ (1)ರಲ್ಲಿನ ಸರ್ಕಾರದ ಆದೇಶ ಸಂಖ್ಯೆ. ಸಿಆಸುಇ 182 ಎಸ್‌ಆರ್‌ಆರ್ 2011, ದಿನಾಂಕ: 06.05.2017 ರಲ್ಲಿ ನೀಡಿರುವ ಮಾರ್ಗಸೂಚಿಗಳನುಸಾರ ಮುಂಬಡ್ತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರಿಗೆ ಮೀಸಲಾತಿ ಅನುಸರಿಸಿರುವ ಎಲ್ಲಾ ವೃಂದಗಳ ಜೇಷ್ಠತಾ ಪಟ್ಟಿಗಳನ್ನು ಪರಿಷ್ಕರಿಸಲು ಆದೇಶಿಸಿರುತ್ತದೆ. ಅದರಂತೆ, ಉಲ್ಲೇಖಿತ (2)ರನ್ವಯ ಸಂಶೋಧನಾ ನಿರ್ದೇಶಕರುಗಳ ಅಧ್ಯಕ್ಷತೆಯಲ್ಲಿ ಪರಿಷ್ಕೃತ ಜೇಷ್ಠತಾ ಪಟ್ಟಿಯನ್ನು ತಯಾರಿಸಲು ವಿಶ್ವವಿದ್ಯಾಲಯದ ಮಟ್ಟದ ಸಮಿತಿಯನ್ನು ರಚಿಸಿ ಆದೇಶಿಸಲಾಗಿರುತ್ತದೆ. ಸದರಿ ಸಮಿತಿಯು ಸಿದ್ಧಪಡಿಸಿದ ಪರಿಷ್ಕೃತ ಜೇಷ್ಠತಾ ಪಟ್ಟಿಗಳನ್ನು ಈ ಕೆಳಗಿನ ಷರತ್ತಿಗೊಳಪಟ್ಟು ಪ್ರಕಟಿಸಲಾಗಿದೆ.

**ಷರತ್ತುಗಳು:**

- ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು ಮತ್ತು ಧಾರವಾಡ ಇಲ್ಲಿಂದ ವರ್ಗಾವಣೆಗೊಂಡ ನೌಕರರ ಪರಿಷ್ಕೃತ ಜೇಷ್ಠತಾ ಮಾಹಿತಿ ಷರತ್ತಿಗೊಳಪಟ್ಟಿರುತ್ತದೆ.
- ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ 2014–15 ನೇ ಸಾಲಿನ ಶಿಕ್ಷಕೇತರ ನೌಕರರ ಮುಂಬಡ್ತಿ ವಿಷಯವಾಗಿ ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗದಲ್ಲಿ ವಿಚಾರಣೆಯಲ್ಲಿರುವ ಪ್ರಕರಣ ಸಂಖ್ಯೆ: 347/2015ರ ಅಂತಿಮ ತೀರ್ಪಿನ ಆದೇಶದ ಷರತ್ತಿಗೊಳಪಟ್ಟಿರುತ್ತದೆ.

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ದಿನಾಂಕ: 22.11.2008 ರಿಂದ ದಿನಾಂಕ: 31.12.2016 ರವರೆಗೆ ಪ್ರಕಟಿಸಲಾಗಿರುವ ವಿವಿಧ ಶಿಕ್ಷಕೇತರ ವೃಂದದ ಜೇಷ್ಠತಾ ಪಟ್ಟಿಯಲ್ಲಿ ನಿಗದಿಪಡಿಸಿರುವ ಪದೋನ್ನತಿ ಪಡೆದ ನೌಕರರ ಜೇಷ್ಠತೆಯನ್ನು ಉಲ್ಲೇಖಿತ (1) ರ ಸರ್ಕಾರಿ ಆದೇಶದನ್ವಯ ಪುನರಾವಲೋಕಿಸಿ, ವಿಶ್ವವಿದ್ಯಾಲಯ ಮಟ್ಟದ ಸಮಿತಿಯು ಈ ಮೇಲಿನ ಷರತ್ತಿಗಳಿಗೊಳಪಟ್ಟು ಶಿಫಾರಸ್ಸು ಮಾಡಿರುವಂತೆ ಸಾಮಾನ್ಯ ಮತ್ತು ಹೈದರಾಬಾದ್ ಕರ್ನಾಟಕ ಸ್ಥಳೀಯ ವೃಂದದ ವಿವಿಧ ಶಿಕ್ಷಕೇತರ ನೌಕರರ ವೃಂದವಾರು ತಾತ್ಕಾಲಿಕ ಪರಿಷ್ಕೃತ ಜೇಷ್ಠತಾ ಪಟ್ಟಿಯನ್ನು **ಅನುಬಂಧ**–1 ಮತ್ತು **ಅನುಬಂಧ–2** ರಲ್ಲಿ ದಿನಾಂಕ: 01.01.2017 ರಂತೆ ಉಲ್ಲೇಖಿತ (5)ರ ಅಧಿಸೂಚನೆಯನ್ವಯ ಹೊರಡಿಸಲಾಗಿದೆ.

ಸದರಿ ತಾತ್ಕಾಲಿಕ ಪರಿಷ್ಕೃತ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿದ ಪ್ರಯುಕ್ತ ಸ್ವೀಕೃತವಾದ ಆಕ್ಷೇಪಣೆ ಅಥವಾ ಸಲಹೆಗಳನ್ನು ದಿನಾಂಕ: 10.01.2018ರ ಸಭೆಯಲ್ಲಿ ವಿಶ್ವವಿದ್ಯಾಲಯ ಮಟ್ಟದ ಸಮಿತಿಯು ಕೂಲಂಕುಷವಾಗಿ ಪರಿಶೀಲಿಸಿ ತೀರ್ಮಾನ ಮಾಡಿರುತ್ತದೆ. ಸದರಿ ಸಮಿತಿಯ ತೀರ್ಮಾನಗಳನ್ವಯ ಮತ್ತು ಕರ್ನಾಟಕ ಸರ್ಕಾರದ ಆದೇಶದ ದಿ:06.05.2017 ರನ್ವಯ ಪ್ರತ್ಯೇಕ ಸಾಮಾನ್ಯ ಮತ್ತು ಹೈದರಾಬಾದ್ ಕರ್ನಾಟಕ ಸ್ಥಳೀಯ ವೃಂದದ ವಿವಿಧ ಶಿಕ್ಷಕೇತರ ನೌಕರರ ವೃಂದವಾರು ಶಿಕ್ಷಕೇತರ ನೌಕರರ ಅಂತಿಮ ಪರಿಷ್ಕೃತ ಜೇಷ್ಠತಾ ಪಟ್ಟಿಯನ್ನು **ಅನುಬಂಧ**–1 ಮತ್ತು **ಅನುಬಂಧ–2** ರಲ್ಲಿ ದಿನಾಂಕ: 01.01.2017 ರಂತೆ ಅಧಿಸೂಚನೆ ಹೊರಡಿಸಲಾಗಿದೆ.

ಸದರಿ ಅಂತಿಮ ಪರಿಷ್ಕೃತ ಜೇಷ್ಠತಾ ಪಟ್ಟಿಯು ವಿಶ್ವವಿದ್ಯಾಲಯದ ಅಧಿಕೃತ ಜಾಲತಾಣ www.uhsbagalkot.edu.in ದಲ್ಲಿ ಲಭ್ಯವಿರುತ್ತದೆ.

ಆದೇಶದ ಮೇರೆಗೆ.

**ಕುಲಸಚಿವರು.**
ತೋ.ವಿ.ವಿ, ಬಾಗಲಕೋಟ

1. ತೋವಿವಿ, ಬಾಗಲಕೋಟೆಯ ಎಲ್ಲಾ ಅಧಿಕಾರಿಗಳಿಗೆ.
2. ಎಲ್ಲಾ ಸಹ ಸಂಶೋಧನಾ ನಿರ್ದೇಶಕರುಗಳು, ಮುಖ್ಯ/ಪ್ರಾದೇಶಿಕ ತೋಟಗಾರಿಕೆ ಸಂಶೋಧನಾ & ವಿಸ್ತರಣಾ ಕೇಂದ್ರಗಳು.
3. ಎಲ್ಲಾ ಮುಖ್ಯಸ್ಥರುಗಳು, ತೋಟಗಾರಿಕೆ ಸಂಶೋಧನಾ & ವಿಸ್ತರಣಾ ಕೇಂದ್ರ/ ವಿಸ್ತರಣಾ ಶಿಕ್ಷಣ ಘಟಕಗಳು/ಎ.ಐ.ಸಿ.ಆರ್.ಪಿ. ಯೋಜನೆಗಳು
4. ಎಲ್ಲಾ ಕಾರ್ಯಕ್ರಮ ಸಂಯೋಜಕರು, ಕೃಷಿ ವಿಜ್ಞಾನ ಕೇಂದ್ರ, ಕೋಲಾರ
5. ವಿವಿಯ ವಿವಿಧ ಶಿಕ್ಷಕೇತರ ನೌಕರರ ಸಂಘಗಳ ಕಾರ್ಯದರ್ಶಿಗಳು
6. ಮುಖ್ಯಸ್ಥರು, ಪ.ಜಾ./ಪ.ಪಂ. ಕೋಶ, ತೋವಿವಿ, ಬಾಗಲಕೋಟ
7. ಕುಲಸಚಿವರು, ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ.
8. ವಿಶ್ವವಿದ್ಯಾಲಯದ ವೆಬ್‌ಸೈಟ್